# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1375 (1548) |
| ಮಾನ್ಯ ಸದಸ್ಯರ ಹೆಸರು | : | ಡಾ\|\| ಉಮಾಶ್ರೀ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 17.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಕೋಲಾರ ಜಿಲ್ಲೆಯ ವೇಮಗಲ್ ಹೋಬಳಿಯಲ್ಲಿ ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣಾ ಘಟಕ ಸ್ಥಾಪಿಸುತ್ತಿರುವುದು ನಿಜವೇ; | ದಿನಾಂಕ:24.09.2024 ರಂದು ಜರುಗಿದ 148ನೇ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಿರ್ಣಯದನ್ವಯ M/s TATA Advanced Systems Limited., ರವರಿಗೆ "Aircraft Manufacturing-Final Assembly Line" ಯೋಜನೆ ಸ್ಥಾಪಿಸಲು ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಸಂಖ್ಯೆ:90 & 89-P ರಲ್ಲಿ ವಿಸ್ತೀರ್ಣ:17-00 ಎಕರೆ ಜಮೀನನ್ನು ದಿನಾಂಕ:20.12.2024 ರಂದು ಹಂಚಿಕೆ ಮಾಡಲಾಗಿರುತ್ತದೆ, ದಿನಾಂಕ:23.12.2024 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ ಹಾಗೂ ದಿನಾಂಕ: 18.02.2025 ರಂದು ಗುತ್ತಿಗೆ ಕರಾರು ಒಡಂಬಡಿಕೆ ಪತ್ರವನ್ನು ನೆರವೇರಿಸಲಾಗಿರುತ್ತದೆ. ಪ್ರಸ್ತುತ ಸದರಿ ಕಂಪನಿಯು ಘಟಕವನ್ನು ನಿರ್ಮಿಸಿ ಕಂಪನಿಯ ಉದ್ದೇಶಿತ ಯೋಜನೆಯಲ್ಲಿ ತೊಡಗಿರುತ್ತದೆ. |
| ಆ. | ಹಾಗಿದ್ದಲ್ಲಿ, ಇದಕ್ಕಾಗಿ ಎಷ್ಟು ಎಕರೆ ಪ್ರದೇಶದ ಜಾಗದ ಅವಶ್ಯಕತೆ ಇದೆ; ಅವಶ್ಯಕತೆ ಇರುವಂತ ಜಮೀನನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆಯೇ; | |
| ಇ. | ಏರ್ ಬಸ್-ಟಾಟಾ ಕಂಪನಿ ಜಂಟಿ ಯೋಜನೆಯ ಈ ಘಟಕಕ್ಕೆ ಸರ್ಕಾರದಿಂದ ನೀಡಲಾಗಿರುತ್ತಿರುವ ಸಹಕಾರ ಏನು; ಸಬ್ಸಿಡಿ ದರದಲ್ಲಿ ಭೂಮಿ, ಬಂಡವಾಳ ಹೂಡಿಕೆ ನೆರವುಗಳನ್ನು ನೀಡಲಾಗಿದೆಯೇ; | ಏರೋಸ್ಪೇಸ್ ಮತ್ತು ಡಿಫೆನ್ಸ್ ಉತ್ಪಾದನಾ ಘಟಕಗಳಿಗೆ ಕರ್ನಾಟಕ ಏರೋಸ್ಪೇಸ್ ಮತ್ತು ಡಿಫೆನ್ಸ್ 2022-27 ನೀತಿಯಡಿ ಈ ಕೆಳಕಂಡ ಸೌಲಭ್ಯಗಳಿಗೆ ಪ್ರೋತ್ಸಾಹ ಅವಕಾಶ ಕಲ್ಪಿಸಲಾಗಿದೆ.<br>➢ ಬಂಡವಾಳ ಸಹಾಯಧನ.<br>➢ ಮುದ್ರಾಂಕ ಶುಲ್ಕ ವಿನಾಯಿತಿ & ನೋಂದಣಿ ಶುಲ್ಕ ವಿನಾಯಿತಿ.<br>➢ ವಹಿವಾಟು ಸಹಾಯ ಧನ.<br>➢ ಇ.ಟಿ.ಪಿ. ಸಹಾಯ ಧನ. |

| | | |
|---|---|---|
| ಈ. | ನೋಂದಣಿ ಶುಲ್ಕದ ಸೌಲಭ್ಯ, ವಿದ್ಯುತ್ ದರದಲ್ಲಿ ವಿನಾಯಿತಿ ನೀಡಲು ಸರ್ಕಾರ ಒಪ್ಪಿಗೆ ಸೂಚಿಸಿದೆಯೇ; | ವಿದ್ಯುತ್ ದರದಲ್ಲಿ ಯಾವುದೇ ವಿನಾಯಿತಿ ನೀಡಿರುವುದಿಲ್ಲ. |
| ಉ. | ಈ ಘಟಕ ಪ್ರಾರಂಭಗೊಂಡಲ್ಲಿ ಸ್ಥಳೀಯ ಯುವಕರಿಗೆ ಉದ್ಯೋಗ ನೀಡಲು ಪ್ರಾಮುಖ್ಯತೆ ನೀಡಲಾಗುವುದೇ? | ಸದರಿ ನೀತಿಯಡಿ ರಿಯಾಯಿತಿ ಹಾಗೂ ಪ್ರೋತ್ಸಾಹಗಳನ್ನು ಪಡೆಯಲು ಕೈಗಾರಿಕೆಗಳು ಒಟ್ಟು ಕನಿಷ್ಠ 70% (ಒಟ್ಟು ಆಧರಿಸಿ) ಉದ್ಯೋಗಾವಕಾಶ ಹಾಗೂ ಗ್ರೂಪ್-ಡಿ ಉದ್ಯೋಗಗಳು 100% ಕನ್ನಡಿಗರಿಗೆ ನೀಡಬೇಕಾಗಿರುತ್ತದೆ. |

**ಸಿಐ 177 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು